# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1653

ಸದಸ್ಯರ ಹೆಸರು : ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ)

ಉತ್ತರಿಸುವ ದಿನಾಂಕ : 18.03.2026

ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ 'ಕಾಮಧೇನು ಸಮುದಾಯ ಬೇಸಾಯ ಸಹಕಾರಿ ಸಂಘ' (ರಿ) ಇವರ ಜವಳಗೇರಾ ಹೋಬಳಿಯ ತುರಕಟ್ಟಿ, ಸುಲ್ತಾನ್‌ಪುರ ಗ್ರಾಮ ಮತ್ತು ವಲ್ಕಂದಿನ್ನಿ ಹೋಬಳಿಯ ಬನ್ನಿಗನೂರು ಗ್ರಾಮದ ಸುಮಾರು 166 ಎಕರೆ 16 ಗುಂಟೆ ಜಮೀನನ್ನು ಸದರಿ ಸಂಘದ 83 ಜನ ಶೇರುದಾರರಿಗೆ ತಲಾ 2 ಎಕರೆಯಂತೆ ಈ ಹಿಂದೆ ಹಂಚಿಕೆ ಮಾಡಿದ್ದು, ಸುಮಾರು 50 ವರ್ಷಗಳಿಂದ ಸದರಿ ಶೇರುದಾರರು ಸಾಗುವಳಿ ಮಾಡುತ್ತಾ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದಿನಾಂಕ:21.03.1966 ರಂದು ನೋಂದಣಿ ಸಂಖ್ಯೆ:222:66 ರನ್ವಯ ನೋಂದಣಿಯಾದ ಕಾಮಧೇನು ಸಮುದಾಯ ಬೇಸಾಯ ಸಹಕಾರಿ ಸಂಘವು ಸರ್ಕಾರದಿಂದ ಭೂಮಿ ಖರೀದಿಸಲು ಸಾಲ ಮತ್ತು ಸಹಾಯ ಧನವನ್ನು ಪಡೆದು ಜವಳಗೇರಾ ಹೋಬಳಿಯ ತುರಕಟ್ಟಿ ಗ್ರಾಮದಲ್ಲಿ 33 ಎಕರೆ 39 ಗುಂಟೆ ಜಮೀನು, ಸುಲ್ತಾನ್‌ಪುರ ಗ್ರಾಮದಲ್ಲಿ 50 ಎಕರೆ 16 ಗುಂಟೆ ಜಮೀನು ಹಾಗೂ ವಲ್ಕಂದಿನ್ನಿ ಹೋಬಳಿಯ ಬನ್ನಿಗನೂರು ಗ್ರಾಮದಲ್ಲಿ 89 ಎಕರೆ 34 ಗುಂಟೆ ಒಟ್ಟು 174-09 ಎಕರೆ/ಗುಂಟೆ ಜಮೀನನ್ನು ಖರೀದಿಸಿರುತ್ತದೆ. |
| ಆ) | ಸದರಿ ಸಂಘವು ಸರ್ಕಾರದಿಂದ ಸಾಲ-ಸಹಾಯಧನ ಪಡೆದು ಜಮೀನನ್ನು ಖರೀದಿಸಿದ್ದು, ಸಂಘವು ಸಮಾಪನಗೊಂಡ ನಂತರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿದವರಾಗಿದ್ದ 83 ಜನ ಶೇರುದಾರರು ಆರ್ಥಿಕವಾಗಿ ದುರ್ಬಲರಾಗಿದ್ದ ಕಾರಣದಿಂದಾಗಿ ಸರ್ಕಾರದಿಂದ ಪಡೆದ ಸಾಲವನ್ನು ಸಕಾಲಕ್ಕೆ ಮರುಪಾವತಿ ಮಾಡಲು ಸಾಧ್ಯವಾಗಿಲ್ಲದಿರುವುದರಿಂದ 1990ರಲ್ಲಿ ಪಹಣಿಯಲ್ಲಿ 'ಕರ್ನಾಟಕ ಸರ್ಕಾರವೆಂದು ಹೆಸರು ಬದಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೈಬರಹದ ಪಹಣಿಯಲ್ಲಿ 1968 ರಿಂದ 1990 ರವರೆಗೆ "ಪ್ರೆಸಿಡೆಂಟ್ ಆಫ್ ಕಾಮಧೇನು" ಎಂದು ನಮೂದಿದ್ದು, ತದನಂತರ ಜಿಲ್ಲಾಧಿಕಾರಿಯವರ ಆದೇಶ ಸಂಖ್ಯೆ:ಕಂದಾಯ.ಭೂಸು:44:95-96, ದಿನಾಂಕ:31.03.1990 ರನ್ವಯ ಕರ್ನಾಟಕ ಭೂ ಸುಧಾರಣಾ ಕಾಯ್ದೆಯ ಮೇರೆಗೆ "ಕರ್ನಾಟಕ ಸರ್ಕಾರ" ಎಂದು ಪಹಣಿಯಲ್ಲಿ ನಮೂದಾಗಿದೆ.<br><br>ಕಾಮಧೇನು ಸಮುದಾಯ ಬೇಸಾಯ ಸಹಕಾರಿ ಸಂಘವು ಸರ್ಕಾರದಿಂದ ಸಾಲ ಮತ್ತು ಧನಸಹಾಯ ಪಡೆದು ಜಮೀನುಗಳನ್ನು ಖರೀದಿಸಿ, ಸಂಘದ ಸದಸ್ಯರಿಗೆ ಹಂಚಿಕೆ ಮಾಡಿರುತ್ತದೆ. ಸದರಿ ಸಂಘಕ್ಕೆ ಸರ್ಕಾರದಿಂದ ಯಾವುದೇ ಜಮೀನನ್ನು ಮಂಜೂರು ಮಾಡಿರುವುದಿಲ್ಲ. ಸದರಿ ಜಮೀನುಗಳನ್ನು ಖರೀದಿಸಲು ಸರ್ಕಾರದಿಂದ ಪಡೆದಿದ್ದ ಸಾಲವನ್ನು ಮರುಪಾವತಿಸದ ಹಿನ್ನಲೆಯಲ್ಲಿ ಪಹಣಿಯಲ್ಲಿ 'ಕರ್ನಾಟಕ ಸರ್ಕಾರ" ಎಂದು ನಮೂದಿಸಲು ಆದೇಶಿಸಲಾಗಿದೆ. ಪ್ರಸ್ತುತ ಕಾಮಧೇನು ಸಮುದಾಯ ಬೇಸಾಯ ಸಹಕಾರಿ ಸಂಘವು ಅಸ್ತಿತ್ವದಲ್ಲಿರುವುದಿಲ್ಲ. ಸದರಿ ಜಮೀನುಗಳಲ್ಲಿ ಸಂಘದ ಸದಸ್ಯರು/ಶೇರುದಾರರು ಉಳುಮೆ ಮಾಡುತ್ತಿದ್ದಾರೆ |

| | | |
|---|---|---|
| ಇ) | ಪ್ರಸ್ತುತ ಸದರಿ 83 ಜನ ಶೇರುದಾರ ಕುಟುಂಬಗಳು ಸರ್ಕಾರಕ್ಕೆ ಮರುಪಾವತಿ ಮಾಡಬೇಕಿರುವ ಸಾಲವನ್ನು ಮರುಪಾವತಿ ಮಾಡಲು ಸಿದ್ಧರಿದ್ದು, ಯಾವ ಅಧಿಕಾರಿಗಳು ಸಹ ಸದರಿ ಮೊತ್ತವನ್ನು ಅವರಿಂದ ಪಡೆಯಲು ಮುಂದಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುವುದಿಲ್ಲ. |
| ಈ) | ಇದೇ ರೀತಿಯ ಪ್ರಕರಣಗಳು ರಾಜ್ಯದಲ್ಲಿ ಸಂಭವಿಸಿದ್ದಲ್ಲಿ, ಸರ್ಕಾರದಿಂದ ಯಾವ ಕ್ರಮವಹಿಸಲಾಗಿರುತ್ತದೆ; | ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ ಮತ್ತು ಇಂತಹ ಪ್ರಕರಣಗಳಲ್ಲಿ, ಜಮೀನುಗಳನ್ನು ಸಂಘದ ಸದಸ್ಯರಿಗೆ ಮಂಜೂರು ಮಾಡಲು ಕರ್ನಾಟಕ ಭೂ ಮಂಜೂರಾತಿ ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |
| ಉ) | ಸದರಿ ಕುಟುಂಬಗಳು ಇತರೆ ಯಾವುದೇ ಪಟ್ಟಾ ಜಮೀನನ್ನು ಹೊಂದದ ಕಾರಣದಿಂದಾಗಿ ಇದೇ ಜಮೀನನ್ನು ಸಾಗುವಳಿ ಮಾಡಿ ಜೀವನ ನಡೆಸುತ್ತಿದ್ದು, ಸದರಿ ಸಾಗುವಳಿದಾರರಿಗೆ ಜಮೀನನ್ನು ಅಧಿಕೃತವಾಗಿ ಮಂಜೂರು ಮಾಡುವ ಸಂಬಂಧ ಸರ್ಕಾರದ ನಿಲುವೇನು? | |

(ಕಡತ ಸಂಖ್ಯೆ: ಆರ್‌ಡಿ 17 ಎಲ್‌ಜಿಆರ್ 2026)

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು